# <u>ಯಾರಿಗೆ ದೂರುವೆನೋ ಗಿರಿರಾಯ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 481.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 108.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 208.
4. **Note:** The wordings (given without highlights) are as per Ref. 1 and Ref. 3. Both are matching almost fully except few which are marked in yellow highlights. The lyrics in Ref. 2 are similar to Ref. 1 except few differences which are marked in green highlights.
5. **Note:** The singer has followed the lyrics as in Ref. 1.

ರಾಗ ಮುಖಾರಿ ಅಟ ತಾಳ

(ಯಾರಿಗೆ) (ಯಾರಲಿ) ದೂರುವೆನೋ ಗಿರಿರಾಯ
ಯಾರೆನ್ನ ಸಲಹುವರೊ || ಪ ||

ಸಾರಿದ ಭಕ್ತಸಂಸಾರಿ ನಿನ್ನಯ ಪದ
ವಾರಿಜವನು ತೋರೊ ಕಾರುಣ್ಯನಿಧಿ ಬೇಗ || ಅಪ ||

ಕಷ್ಟ (ಜನ್ಮದಿ) (ಜನ್ಮಕೆ) ಬಂದೆನೊ ಧಾರಿಣಿಯೊಳು
ದುಷ್ಟರಿಂದಲಿ ನೊಂದೆನೊ
ನಿಷ್ಠುರ ಬೇಡವೊ ನಿನ್ನ ನಂಬಿದ ಮೇಲೆ
ಸೃಷ್ಟಿಗೊಡೆಯ ಎನ್ನ ಬಿಟ್ಟು ಕಳೆಯಬೇಡ || ೧ ||

ಹಿಂದೆ ಮಾಡಿದ ಕರ್ಮವು ಈ ಭವದೊಳು
ಮುಂದಾಗಿ ತೋರುತಿದೆ
(ಇಂದಿಲ್ಲ) (ಇಂದೇನು) ಗತಿಯದರಿಂದ ನೊಂದೆನು ನಾನು
ಮಂದರಧರ ಗೋವಿಂದ ನೀನಲ್ಲದೆ || ೨ ||

ಹಗಲು ಕತ್ತಲೆ (ಸುತ್ತಿಯೆ) (ಸುತ್ತಿದೆ) ಕಂಗೆಡಿಸುತ್ತ
ಹಗೆಯಾಗಿ ನಗಿಸುತಿದೆ
ಉಗುರಿನ (ಸಿಗಿಗೆ) (ಸೀಗೆ) (ಸಿರಿಗೆ) ಮುಳ್ಳುಗಳೀಗ ನೆಟ್ಟುವು
ಸೊಗವ ಹಾರಿಸಿ ಎದೆ ದಿಗಿಲುಗೊಳಿಸುತಿದೆ || ೩ ||

(ಬಾಡಿದರಳಿ ಸಸಿಯ) (ಬಾಡಿದ ಅರಳಿಯನು) ಕಲ್ಲಿನ ಮೇಲೆ
ಈಡಾಗಿ ನಾಟಿದರೆ
ಬೇಡಿಕೊಂಡರೆ ತಳಿರು ಮೂಡಿ ಬರುವುದುಂಟೆ
ರೂಢಿಗೊಡೆಯ ನೀನು ನೋಡದಿದ್ದ ಮೇಲೆ || ೪ ||

ಹಲವು ಪರಿಯ ಕಷ್ಟವ
ನಿನ್ನಯ ಪಾದ ಜಲಜದ ಕರುಣದಲಿ
ಸುಲಿಗೆ ಕೊಟ್ಟೆನು ನಾನು ಸೂರೆಗಾರರಿಗೆಲ್ಲ
ಒಲವಾಗು ಎನ್ನೊಳು ಪುರಂದರ ವಿಠಲ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ವಾರಿಜ** = ಕಮಲ
**ಈಡಾಗು** = ಗುರಿಯಾಗು
**ಧಾರಿಣಿ** = ಭೂಮಿ

**Classification:** Keerthane
**Ankita:** purandara vittala
**Location:** NA
**Category:** Vishnu Stuti, Pooja Tatva.
**Sub-Category:** srinivasa, karuna, samsara, janma, bhumi, padma, karma, bhava, loka, govinda, vishnu, hagalu, kallu, niru, nage, shatru, muLLu,
**Pravachana:** NA
**Explanation:** NA